4033/5075/6035/7035

VI Semester 3 Years LL.B./VIII Semester 5 Year B.Com. LL.B./B.A. LL.B. (Maj.-Min. System)/ B.B.A. LL.B. Examination, June/July 2025 (Even Sem.)

# LAW OF EVIDENCE

Duration : 3 Hours Max. Marks : 80

**Instructions :**
1. **Answer all five Units.**
2. **One essay type questions and short note/problems is compulsory from each Unit.**
3. **Figures to the right indicate marks.**
4. **Answers should be written either in Kannada or English completely.**

## UNIT – I

Q. No. 1. (a) Define the term 'Evidence and distinguish between oral and documentary evidence and direct and circumstantial evidence. Marks : 10

'ಸಾಕ್ಷ್ಯ' ಎಂಬ ಪದವನ್ನು ವ್ಯಾಖ್ಯಾನಿಸಿ, ಮೌಖಿಕ ಮತ್ತು ದಸ್ತಾವೇಜುವಿನ ಸಾಕ್ಷ್ಯ ಹಾಗೂ ನೇರ ಮತ್ತು ಸಾಂದರ್ಭಿಕ ಸಾಕ್ಷ್ಯಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿ.

OR/ಅಥವಾ

(a) Explain the expression 'May presume', 'shall presume' and 'conclusive proof' as used in Section 4 of the Indian. Evidence Act, 1872. Marks : 10

ಭಾರತೀಯ ಸಾಕ್ಷ್ಯ ಅಧಿನಿಯಮ, 1872 ರ ಕಲಂ 4ರ ಅಡಿಯಲ್ಲಿ ಉಲ್ಲೇಖವಾಗಿರುವ ''ಪೂರ್ವಭಾವನೆ ಮಾಡಬಹುದು'', ''ಪೂರ್ವಭಾವನೆ ಮಾಡಿಕೊಳ್ಳತಕ್ಕದ್ದು ಮತ್ತು ''ನಿರ್ಣಾಯಕ ರುಜುವಾತನ್ನು'' ವ್ಯಾಖ್ಯಾನಿಸಿ.

Q. No. 1. (b) 'A' after hearing that 'C' had been murdered went to the spot and found that the body of 'C' being taken to the house of 'C' by four persons, who told him that 'B' had murdered 'C' and had run away. Does the statement of those four persons form part of Res gestae. Marks : 6

'A' ಎಂಬಾತನಿಗೆ C'ಯು ಕೊಲೆಯಾಗಿರುವ ವಿಷಯ ತಿಳಿದ ತಕ್ಷಣ, ಕೊಲೆಯಾದ ಸ್ಥಳಕ್ಕೆ ಹೋದಾಗ, ಅಲ್ಲಿ ನಾಲ್ಕು ಜನ 'C'ಯ ಮೃತದೇಹವನ್ನು, 'C' ಅವರ ಮನೆಗೆ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಅವರು 'C'ಯನ್ನು 'B' ಎಂಬಾತನು ಕೊಂದು ಓಡಿ ಹೋದನು ಎಂದು 'A' ತಿಳಿಸುತ್ತಾರೆ. ಈ ಹೇಳಿಕೆಯು ರೆಸ್ ಗಸ್ತೆ ಎಂದು ಕರೆಯಬಹುದೆ ?

OR/ಅಥವಾ

(b) 'A' is accused of murdering a women 'P'. It is sought to be proud that two years ago he murdered his wife 'Z' and so he had the mens rea to murder 'P'. Is the evidence relevant and admissible ? Marks : 6

'A' ಎಂಬಾತನ ಮೇಲೆ 'P' ಎಂಬ ಹೆಂಗಸನ್ನು ಕೊಲೆ ಮಾಡಿರುವ ಆರೋಪವಿದೆ. ಅವನು ಎರಡು ವರ್ಷಗಳ ಹಿಂದೆ ತನ್ನ ಹೆಂಡತಿಯಾದ 'Z' ಅನ್ನು ಕೊಂದಿರುವ ಬಗ್ಗೆ ಸಾಕ್ಷ್ಯ ಸಾಬೀತು ಆಗಿರುವುದರಿಂದ, ಈ ಸಾಕ್ಷ್ಯಿಯ ಮುಖಾಂತರ ಅವನಿಗೆ (ಅಂದರೆ 'A')ಗೆ 'P' ಯನ್ನು ಕೊಲೆಮಾಡುವ ಅಪರಾಧಿಕ ಮನಸ್ಸು ಇತ್ತು ಎಂದು ಸಾಬೀತುಪಡಿಸಬಹುದೇ ? ಈ ಸಾಕ್ಷ್ಯಿಯು ಸುಸಂಬದ್ಧವೇ ?

P.T.O.

UNIT – II

Q. No. 2. (a) What is dying declaration ? Discuss its evidentiary value. Marks : 10
ಮರಣಕಾಲಿಕ ಹೇಳಿಕೆಯೆಂದರೇನು ? ಈ ಹೇಳಿಕೆಯ ಸಾಕ್ಷ್ಯದ ಮೌಲ್ಯದ ಬಗ್ಗೆ ಚರ್ಚಿಸಿ.

OR/ಅಥವಾ

(a) Ordinarily the judgement of courts binds only the parties to it". Discuss. Marks : 10
''ಸಾಮಾನ್ಯವಾಗಿ ನ್ಯಾಯಾಲಯದ ತೀರ್ಪುಗಳು ಕೇವಲ ಪಕ್ಷಗಾರರ ಮೇಲೆ ಮಾತ್ರ ಬಂಧಿತವಾಗುತ್ತದೆ'' – ಚರ್ಚಿಸಿರಿ.

Q. No. 2. (b) Write a note on "Expert opinion". Marks : 6
''ತಜ್ಞರ ಅಭಿಪ್ರಾಯದ'' ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

(b) Write a note on "Retracted Confessions". Marks : 6
''ಹಿಂಪಡೆದ ತಪ್ಪೊಪ್ಪುಗಳು'' ಬಗ್ಗೆ ಟಿಪ್ಪಣಿ ಬರೆಯಿರಿ.

UNIT – III

Q. No. 3. (a) "Oral evidence in all cases must be direct" – explain this rule with illustrations and exceptions. Marks : 10
''ಮೌಖಿಕ ಸಾಕ್ಷ್ಯಗಳು ಎಲ್ಲಾ ಪ್ರಕರಣಗಳಲ್ಲಿ ನೇರವಾಗಿರಬೇಕು'' ಉದಾಹರಣೆಗಳೊಂದಿಗೆ ಹಾಗೂ ಅಪವಾದಗಳೊಂದಿಗೆ ಈ ನಿಯಮವನ್ನು ವಿವರಿಸಿರಿ.

OR/ಅಥವಾ

(a) What is public and private documents ? Explain rules relating to proof of them. Marks : 10
ಸಾರ್ವಜನಿಕ ಮತ್ತು ಖಾಸಗಿ ದಸ್ತಾವೇಜು ಎಂದರೇನು ? ಅವುಗಳ ರುಜುವಾತಿನ ಸಂಬಂಧಿತ ನಿಯಮಗಳನ್ನು ವಿವರಿಸಿರಿ.

Q. No. 3. (b) Write a note on 'Secondary evidence'. Marks : 6
''ದ್ವಿತೀಯ ಸಾಕ್ಷ್ಯದ'' ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' agrees in writing to pay 'B' 10,000/- on the first of March 1993. Can the fact that at the same time an oral agreement was made that money should not be paid till 31st March be proved ? Advice. Marks : 6
'A' ಎಂಬಾತನು 'B' ಎಂಬುವವನಿಗೆ 10,000/- Rs. ನಗದನ್ನು 1 ನೇ ಮಾರ್ಚ್ 1993 ರಂದು ನೀಡುವುದಾಗಿ ಲಿಖಿತ ಸ್ವರೂಪದ ಒಪ್ಪಂದ ಮಾಡಿಕೊಂಡಿರುತ್ತಾನೆ. ಅದೇ ಸಮಯದಲ್ಲಿ, ಇಬ್ಬರ ನಡುವೆ ಮೌಖಿಕವಾಗಿ ಒಪ್ಪಂದವಾಗಿದ್ದು, ಅದರ ಪ್ರಕಾರ 31ನೇ ಮಾರ್ಚ್‌ನವರೆಗೂ ಹಣವನ್ನು ನೀಡಬಾರದೆಂದು ಉಲ್ಲೇಖವಿತ್ತು. ಈ ಸಂಗತಿಯನ್ನು ಸಾಬೀತುಪಡಿಸಬಹುದೇ ? ವಿವರಿಸಿ.

UNIT – IV

Q. No. 4. (a) What are the rules of Burden of proof ? State the provisions relating to burden of proof. Marks : 10
ರುಜುವಾತಿನ ಹೊಣೆಯ ನಿಯಮವೆಂದರೇನು ? ರುಜುವಾತಿನ ಭಾರ ಸಂಬಂಧಿತ ನಿಯಮಗಳನ್ನು ತಿಳಿಸಿರಿ.

OR/ಅಥವಾ

(a) Define the expression 'Estoppel' and discuss its kinds. Marks : 10
ಪ್ರತಿಬಂಧ/ಉಪಬಂಧವನ್ನು ವ್ಯಾಖ್ಯಾನಿಸಿ. ಇವುಗಳ ವಿವಿಧ ವಿಧಗಳನ್ನು ವಿವರಿಸಿರಿ.

Downloaded by 426 on 16-06-2025 09:03:12

Q. No. 4. (b) 'A' is accused of B's murder. In his defense he contends that by grave and sudden provocation given by 'B' he was deprived of the power of self-control. On whom does the burden of proof lies. Decide. Marks : 6

'A' ಎಂಬುವವನ ಮೇಲೆ 'B'ಯನ್ನು ಕೊಲೆ ಮಾಡಿರುವ ಆರೋಪವಿದೆ. 'A' ಯು ತನ್ನನ್ನು ರಕ್ಷಿಸುವ ಸಲುವಾಗಿ ತನಗೆ 'B' ಮಾಡಿದಂತಹ ಗಂಭೀರ ಮತ್ತು ಹಠಾತ್ ಪ್ರಚೋದನೆಯಿಂದ ತನ್ನ ಸ್ವಯಂ ನಿಯಂತ್ರಣವನ್ನು ಕಳೆದುಕೊಂಡಿದ್ದಾಗಿ ವಾದಿಸುತ್ತಾನೆ. ಈ ಪ್ರಕರಣದಲ್ಲಿ ರುಜುವಾತಿನ ಋಣಭಾರ ಯಾರ ಮೇಲಿದೇ ? ತೀರ್ಮಾನಿಸಿ.

OR/ಅಥವಾ

(b) Write a note on Presumption in "dowry death". Marks : 6

''ವರದಕ್ಷಿಣೆ ಸಾವಿನ'' ಕುರಿತು ಇರುವ ಪೂರ್ವಭಾವನೆಯ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – V

Q. No. 5. (a) "Some of the witnesses cannot be compelled to disclose communications" – State and explain their privilege. Marks : 10

''ಕೆಲವು ಸಾಕ್ಷಿಗಳ ಸಂವಹನಗಳನ್ನು ಬಹಿರಂಗಪಡಿಸಲು ಒತ್ತಾಯಿಸಲಾಗುವುದಿಲ್ಲ'' – ಈ ಸವಲತ್ತುಗಳನ್ನು ತಿಳಿಸಿ ವಿವರಿಸಿರಿ.

OR/ಅಥವಾ

(a) Discuss the object of examination-in-chief, Cross-Examination and Re-examination of a witness. Marks : 10

ಸಾಕ್ಷಿಗಳ ಮುಖ್ಯ ವಿಚಾರಣೆ, ಪಾಟೀ ಸವಾಲು ಮತ್ತು ಮರು ವಿಚಾರಣೆಯ ಪ್ರಮುಖ್ಯ ಉದ್ದೇಶಗಳ ಬಗ್ಗೆ ಚರ್ಚಿಸಿ.

Q. No. 5. (b) Write a note on "Hostile Witness". Marks : 6

''ಪ್ರತಿಕೂಲ ಸಾಕ್ಷಿ''ಯ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

(b) Sita informed Ram in the year 1988 that she had committed theft of the ornaments of her neighbour. Thereafter Rama and Sita were married in 1989. In the year 1992 prosecution commenced against Sita in respect of theft of ornaments. Rama is called to give evidence in this case. Can Ram disclose the communication made to him by Sita ? Decide. Marks : 6

ಸೀತೆ ಎಂಬುವವರು ರಾಮ್ ಎಂಬುವವರಿಗೆ 1988 ರಲ್ಲಿ ಆಕೆ ತಮ್ಮ ಪಕ್ಕದ ಮನೆಯವರ ಒಡವೆಯನ್ನು ಕಳವು ಮಾಡಿದ್ದೆ ಎಂದು ತಿಳಿಸುತ್ತಾಳೆ. ಆದರ ನಂತರ, 1989ರಲ್ಲಿ ರಾಮ್ ಮತ್ತು ಸೀತೆ, ಇಬ್ಬರು ಮದುವೆಯಾದರು. 1992 ರಲ್ಲಿ ಸೀತೆಯ ವಿರುದ್ಧ ಕಳ್ಳತನದ ಆರೋಪದ ಮೇಲೆ ವಿಚಾರಣೆ ಶುರುವಾಗಿದೆ. ಈ ವಿಚಾರಣೆಯಲ್ಲಿ ರಾಮ್‌ನನ್ನು ಸಾಕ್ಷಿಯಾಗಿ ಕರೆದಿರುತ್ತಾರೆ. ಈ ಸಂದರ್ಭದಲ್ಲಿ ರಾಮ್‌ನು ತನ್ನ ಮತ್ತು ಸೀತೆಯ ನಡುವೆ ಆದ ಸಂವಹನವನ್ನು ಇಲ್ಲಿ ಬಹಿರಂಗಪಡಿಸಬಹುದೇ ? ನಿರ್ಧರಿಸಿ.

---

# 0601/2075/1001

**VI Semester 3 Year LL.B./X Semester 5 Year B.A. LL.B./B.B.A. LL.B./B.Com. LL.B./ B.A. LL.B. (Maj.-Min. System) Examination, June/July 2025 (Even Sem.)**

## LAW OF EVIDENCE

Duration : 3 Hours

Max. Marks : 100

**Instructions :**

1. **Answer Q. No. 9 and any five of the remaining questions.**
2. **Q. No. 9 carries 20 marks and the remaining questions carry 16 marks each.**
3. **Answers should be written either in English or in Kannada completely.**

Q. No. 1. What is evidence ? State different kinds of evidence.

ಸಾಕ್ಷ್ಯ ಎಂದರೇನು ? ವಿವಿಧ ರೀತಿಯ ಸಾಕ್ಷ್ಯಗಳನ್ನು ತಿಳಿಸಿರಿ.

Marks : 16

Q. No. 2. "No confession made to the Police Officer shall be proved as against a person accused of any offence." Examine the statement along with exceptions under Indian Evidence Act.

''ಆರೋಪಿತ ವ್ಯಕ್ತಿಯು ಪೊಲೀಸ್ ಅಧಿಕಾರಿಗೆ ನೀಡಿದ ತಪ್ಪೊಪ್ಪಿಗೆಯನ್ನು ಆತನ ವಿರುದ್ಧ ರುಜುವಾತು ಮಾಡುವಂತಿಲ್ಲ'' ಹೇಳಿಕೆಯನ್ನು ಪರಿಶೀಲಿಸಿರಿ. ಈ ಬಗ್ಗೆ ಭಾರತ ಸಾಕ್ಷ್ಯ ಅಧಿನಿಯಮದಡಿಯಲ್ಲಿರುವ ಅಪವಾಧಗಳನ್ನು ತಿಳಿಸಿರಿ.

Marks : 16

Q. No. 3. What is dying declaration ? Explain the rules regarding the relevancy of dying declaration.

ಮರಣಕಾಲಿಕ ಹೇಳಿಕೆ ಎಂದರೇನು ? ಮರಣಕಾಲಿಕ ಹೇಳಿಕೆಗಳ ಸುಸಂಬದ್ಧತೆಯ ಸಂಬಂಧಿತ ನಿಯಮಗಳನ್ನು ವಿವರಿಸಿರಿ.

Marks : 16

Q. No. 4. Examine the rules regarding kinds of documentary evidence. Explain the circumstances in which secondary evidence relating to document may be given.

ವಿವಿಧ ಸಾಕ್ಷ್ಯ ದಸ್ತಾವೇಜಿಗೆ ಸಂಬಂಧಿತ ನಿಯಮಗಳನ್ನು ಪರಿಶೀಲಿಸಿರಿ. ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ದ್ವಿತೀಯಕ ಸಾಕ್ಷ್ಯವನ್ನು ನೀಡಬಹುದಾದ ಸಂದರ್ಭಗಳನ್ನು ವಿವರಿಸಿರಿ.

Marks : 16

Q. No. 5. Explain the relevancy of character evidence in civil and criminal cases.

ದಿವಾನಿ ಮತ್ತು ಅಪರಾಧಿಕ ಪ್ರಕರಣಗಳಲ್ಲಿ ಚಾರಿತ್ರ್ಯ ಸಾಕ್ಷ್ಯದ ಸುಸಂಬದ್ಧತೆಯ ಬಗ್ಗೆ ವಿವರಿಸಿ.

Marks : 16

Q. No. 6. Explain the scope and extent of privileged communication as provided in Indian Evidence Act.

ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ನೀಡಿದಂತೆ ವಿಶೇಷಾಧಿಕಾರದ ಸಂವಹನಗಳ ವ್ಯಾಪ್ತಿ ಮತ್ತು ವಿಸ್ತರಣೆಯನ್ನು ವಿವರಿಸಿರಿ.

Marks : 16

Q. No. 7. Explain the presumptions in dowry death and rape cases. Marks : 16

ವರದಕ್ಷಿಣೆ ಸಾವುಗಳು ಮತ್ತು ಅತ್ಯಾಚಾರ ಪ್ರಕರಣಗಳಲ್ಲಿಯ ಪೂರ್ವ ಭಾವನೆಗಳನ್ನು ವಿವರಿಸಿ.

Q. No. 8. Write a short note on **any two** : Marks : 2x8=16

ಯಾವುದೇ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Leading questions

ಉತ್ತರ ಸೂಚಕ ಪ್ರಶ್ನೆಗಳು

(b) Admission

ಅಂಗೀಕಾರ

(c) Alibi.

ಅಲಿಬಿ.

Q. No. 9. Answer **any two** with reasons : Marks : 2x10=20

ಯಾವುದೇ ಎರಡಕ್ಕೆ ಕಾರಣಗಳೊಂದಿಗೆ ವಿವರಿಸಿ :

(a) 'A' agrees to sell a horse to 'B' for Rs. 1,000 or Rs. 1,500 in writing. Can evidence be given to show which price was to be given ?

'ಅ' ಎಂಬುವನು 'ಬ' ನಿಗೆ ತನ್ನ ಕುದುರೆಯನ್ನು ರೂ. 1,000 ಗೆ ಅಥವಾ ರೂ. 1,500 ಗಳಿಗೆ ಮಾರಾಟಮಾಡಲು ಲಿಖಿತ ರೂಪದಲ್ಲಿ ಒಪ್ಪಿಕೊಳ್ಳುತ್ತಾನೆ. ಅವನು ಯಾವ ಬೆಲೆಗೆ ಮಾರಾಟ ಮಾಡಲು ತಯಾರಿದ್ದ ಎಂಬುದನ್ನು ಸೂಚಿಸಲು ಸಾಕ್ಷ್ಯವನ್ನು ನೀಡಬಹುದೇ ?

(b) 'N' intends to give evidence regarding the fact that he refused to buy the goods below the fixed price. Can 'N' do so ?

'ನ' ನಿರ್ಧರಿಸಿದ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಖರೀದಿಸಲು ನಿರಾಕರಿಸಿದ್ದರ ಸಂಬಂಧ ಸಾಕ್ಷ್ಯವನ್ನು ನೀಡಲು ಬಯಸುತ್ತಾನೆ. 'ನ' ಹಾಗೆ ಮಾಡಬಹುದೇ ?

(c) In a murder case, a 3 year old child's evidence is intended to be given. In a criminal case can such evidence be given ?

ಮೂರು ವರ್ಷದ ಮಗುವಿನ ಸಾಕ್ಷ್ಯವನ್ನು ಕೊಲೆಯ ಪ್ರಕರಣದಲ್ಲಿ ನೀಡಲು ಉದ್ದೇಶಿಸಲಾಗಿದೆ. ಅಪರಾಧಿಕ ಪ್ರಕರಣದಲ್ಲಿ ಹಾಗೆ ನೀಡಬಹುದೇ ?

---

Downloaded by 426 on 16-06-2025 09:02:16
Downloaded on 16-06-2025 08:59:15